1

# ಪ್ರಶ್ನೆ:

# “ನೀನು ಧರ್ಮವಿಲ್ಲದೆ ಸಂತೋಷ ಉಳ್ಳವನಾಗಿರಬಹುದಾದರೆ, ಅದರ ಬಗ್ಗೆ ಯಾಕೆ ತೊಂದರೆ ತೆಗೆದುಕೊಳ್ಳುವಿ?”

## ಉತ್ತರ:

ನೀನು ಧರ್ಮವಿಲ್ಲದೆ ಸಂತೋಷವುಳ್ಳವನಾಗಿರಬಹುದಾದರೆ, ಅದರ ಬಗ್ಗೆ ಯಾಕೆ ತೊಂದರೆ ತೆಗೆದುಕೊಳ್ಳುವಿ? ಆ ಪ್ರಶ್ನೆಯೂ ಆಸ್ಟ್ರೇಲಿಯಾದಲ್ಲಿ ನಮ್ಮ ಮಿಶನ್ ಸೇವೆಯಲ್ಲಿ ಬಹಲ ಸಲ ಬಂದಿತು. ಜನರಿಗಾಗಿ ಬೈಬಲ್ ಅಧ್ಯಯನಗಳನ್ನು ಏರ್ಪಡಿಸುತ್ತಿದ್ದಾಗ, ವಿರೋಧಗಳನ್ನು ಎದುರಿಸಿದ್ದು ಬಹಳ ಕಡಿಮೆ. ಆದರೆ ಉದಾಸೀನ ತೆಗಳನ್ನು ಎದುರಿಸಿದ್ದು ಬಹಳಸಲ. ನಮ್ಮ ಆರಾಧನೆಗಳಲ್ಲಿ ಭಾಗವಹಿಸಲು ಜನರು ಆಮಂತ್ರಿಸಲ್ಪಡುವಾಗ, ಅವರು, “ಇಲ್ಲ, ಬರುವದಕ್ಕೆ ನಾನು ತೊಂದರೆ ತೆಗೆದು ಕೊಳ್ಳಲಿಕ್ಕಿಲ್ಲ” ಇಲ್ಲವೇ, “ನನಗೆ ಬರಲಿಕ್ಕಾಗಲಿಕ್ಕಿಲ್ಲ” ಎಂದು ಉತ್ತರ ಕೊಡುತ್ತಿದ್ದರು. ಜನರು ಧರ್ಮದ ಬಗ್ಗೆ ಚಿಂತಿಸುವವರಾಗಿರುವದಿಲ್ಲ. ಅವರು ಹಾಗಿರಬೇಕೋ?

ಧರ್ಮದ ಬಗ್ಗೆ ಗಮನ ಕೊಡದೇ ಹೋಗುವವರು ಎಷ್ಟೋ ಸಲ ಸಂತೋಷದಿಂದ ಇರುವುದರಿಂದ ಪ್ರಶ್ನೆಯು ಜಟಿಲಗೊಳಿಸಲ್ಪಟ್ಟಿದೆ. ಉದಾಹರಣೆಯಾಗಿ, ಆಸ್ಟ್ರೇಲಿಯಾದಲ್ಲಿ ಒಂದು ವರ್ತಮಾನ ಪತ್ರಿಕೆಯ ವರದಿಯು, ಸಂದರ್ಶಿಷಿಸಿದ ಎಲ್ಲಾ ಆಸ್ಟ್ರೇಲಿಯನ್ ವಯಸ್ಕರಲ್ಲಿ 55 ಶತ ಜನರು “ಬಹಳ ಸಂತೋಷವುಳ್ಳವರು,” 43 ಶತ ಜನರು “ಸಾಧರಾಣವಾಗಿ ಸಂತೋಷವುಳ್ಳವರು,” ಮತ್ತು ಕೇವಲ 2 ಶತ ಜನರು “ಸಂತೋಷ ವಿಲ್ಲದವರು” ಆಗಿದ್ದಾರೆಂದು ತೋರಿಸಿತು. ಯು. ಎಸ್. ದಲ್ಲಿಯ ಗಣತಿಯೂ ಅಮೇರಿಕನ್‌ರೂ ಅಷ್ಟೇ ಸಂತೋಷವುಳ್ಳವರಾಗಿದ್ದಾರೆ ಎಂಬುದನ್ನು ತೋರಿಸಿತು.[1]

ಈ ಸುಖಸಂತೋಷವು ಧರ್ಮದಲ್ಲಿ ಒಳಗೊಳ್ಳದಿದ್ದುದರಿಂದ ಹೆಚ್ಚಾಗಿ ಸಾಧಿಸಲ್ಪಡುತ್ತಿದೆ. ಹೆಚ್ಚಾದ ಆಸ್ಟ್ರೇಲಿಯನ್ನರು ಚರ್ಚಿಗೆ ಹೋಗುವದಿಲ್ಲ. ಉದಾಹರಣೆಯಾಗಿ, ಸಾಮಾನ್ಯ ಆಸ್ಟ್ರೇಲಿಯನ್ನನು ತನ್ನ ಸ್ನೇಹಿತರೊಂದಿಗಿದ್ದು, ಅವರಿಗೆ ಸಹಾಯ ಮಾಡುವವರಲ್ಲಿ ಆಸಕ್ತಿಯುಳ್ಳ ಒಳ್ಳೇ ಮನುಷ್ಯನಂತೆ ಕುಟುಂಬಕ್ಕೆ ಸಹಾಯಮಾಡುವ, ತನ್ನ ಸ್ವಂತ ಮನೆ ಹೊಂದಿರುವ, ಸ್ವಲ್ಪ ಹಣ ಉಳಿಸಿಕೊಳ್ಳುವ, ತನ್ನ ತೋಟಕ್ಕಾಗಿ ಸಾಕಷ್ಟು ಸಮಯ ಕೊಡುವ, ಪಂದ್ಯಾಟಗಳಲ್ಲಿ ಆಸಕ್ತಿಯುಳ್ಳ ಮನಷ್ಯನಂತೇ ಚಿತ್ರಿಸಲ್ಪಟ್ಟಿದ್ದಾನೆ. Sun, surf, and suds (beer) - ಈ ಮೂರು, ಅನೇಕ

ಆಸ್ಟ್ರೇಲಿಯನ್ನರ ದೇವರುಗಳೆಂದು ಹೇಳಲ್ಪಟ್ಟಿದೆ, ಬೈಬಲಿನ ದೇವರು ಅವನ ಜೀವನದ ಮೇಲೆ ಪರಿಣಾಮ ಮಾಡುವುದೇ ಇಲ್ಲ.

ಧರ್ಮದ ಬಗ್ಗೆ ಏನು? ಅವನಿಗೆ, ಧರ್ಮವು ವೃದ್ಧರಿಗೆ, ರೋಗಿಗಳಿಗೆ, ಬಡವರಿಗೆ ಸಂಬಂಧಿಸಿದ್ದಾಗೆ. ಸಮಸ್ಯೆಗಳೊಂದಿಗೆ ಇರುವ - ಮಾನಸಿಕ, ದೈಹಿಕ, ಇಲ್ಲವೇ ಆರ್ಥಿಕ - ಸಮಸ್ಯೆಗಳಿರುವ ಜನರು ಮಾತ್ರವೇ ಧಾರ್ಮಿಕತೆಯುಳ್ಳವರಾಗಿದ್ದಾರೆ. ಅವರಿಗೆ ಜೀವನದಲ್ಲಿ ಉಳಿದುಕೊಳ್ಳಲು ಊರುಗೋಲಿನಂತೆ ಧರ್ಮದ ಅಗತ್ಯತೆಯಿದೆ. ಆದರೆ, ಅವನ ಸ್ವಂತ ಮನಸ್ಸಿನಲ್ಲಿ, ಚೆನ್ನಾಗಿ ಸಮತೋಲನವಿದ್ದವರಲ್ಲಿ, ಐಶ್ವರ್ಯವಂತರಲ್ಲಿ, ಮಧ್ಯಮ ಇಲ್ಲವೇ ಉನ್ನತ ವರ್ಗದವರಲ್ಲಿ, ಬಲವುಳ್ಳವರಲ್ಲಿ, ಸ್ವತಂತ್ರವಾದ ವ್ಯಕ್ತಿಗಳಿಗೆ ಧರ್ಮದ ಅಗತ್ಯತೆಯಿಲ್ಲ. ಅಂಥವನಿಗೆ ಊರುಗೋಲಿನ ಅಗತ್ಯತೆಯಿಲ್ಲ. ಆದುದರಿಂದ ಅವನು ಧರ್ಮದ ಬಗ್ಗೆ ಚಿಂತಿಸುವದಿಲ್ಲ.

ಈ ಮನೋಭಾವನೆಯೊಂದಿಗೆ ಇರುವ ಜನರು ಆಸ್ಟ್ರೇಲಿಯಾಕ್ಕೇ ಮಾತ್ರವೇ ನೇಮಿತವಾಗಿರುವದಿಲ್ಲ. ಅವರು ನಿಮ್ಮ ಪಕ್ಕದಲ್ಲಿ ಜೀವಿಸುತ್ತಿರುವರು; ಅವರು ನಿಮ್ಮೊಂದಿಗೆ ಕೆಲಸ ಮಾಡುವರು; ಅವರು ಬೀದಿಯಲ್ಲಿ ನಿಮ್ಮನ್ನು ಸಂದರ್ಶಿಸುವರು ಮತ್ತು ಸೂಪರ್ ಮಾರ್ಕೇಟಿನಲ್ಲಿ ನಿಮಗಾಗಿ ಕಾದಿರುವರು. ಹೆಚ್ಚಾದ ಅಮೇರಿಕನ್‌ರಲ್ಲಿ ಸ್ವಲ್ಪ ಇಲ್ಲವೇ ಯಾವುದೇ ಸಮಯ ಧರ್ಮಕ್ಕಾಗಿ ಇರುವದಿಲ್ಲ. ಅನೇಕ ಅಮೇರಿಕನ್‌ರಿಗೆ, ದೇವರು ಸತ್ತು ಹೋಗಿದ್ದಾನೆ - ಕಡಿಮೆ ಪಕ್ಷ ಸತ್ತವನ ಹಾಗೆ ಇರುವನು ಹೀಗೆ ಇದು ಅವರ ಜೀವನಗಳಲ್ಲಿ ಭಿನ್ನತೆಯನ್ನು ಮಾಡುತ್ತದೆ.

ಅವರು ಸರಿಯಾಗಿರುವವರೋ? ಧಾರ್ಮಿಕತೆಯಿಲ್ಲದೇ ಸಂತೋಷಕರ ವಾದ ಜೀವನವನ್ನು ಅವರು ಜೀವಿಸಬಲ್ಲವರಾದರೆ, ಧರ್ಮದ ಬಗ್ಗೆ ಚಿಂತಿಸುವದಕ್ಕೆ ಯಾವುದೇ ಕಾರಣವಿರುವುದೋ? ನನ್ನ ಉತ್ತರವು: ಹೌದು, ನೀನು ಧಾರ್ಮಿಕತೆ ಯುಳ್ಳವನಾಗಿರುವ ಅಗತ್ಯತೆಯಿದೆ. ಆದರೆ ಯಾಕೆ?

## ಯಾಕಂದರೆ ಮಾನವನು ಒಂದು ಪ್ರಾಣಿಯಾಗಿರುವದಿಲ್ಲ

ಶಾಸ್ತ್ರೀಯವಾದ ದಂತಕಥೆಗಳ ಶಾಸ್ತ್ರದಲ್ಲಿ, ಕುರಿಗಾಹಿಗಳ ರಕ್ಷಣೆ ಮಾಡುವ ರೋಮನ್ ಗ್ರಾಮೀಣ ದೇವತೆಯೊಬ್ಬಳು ಅರ್ಧ - ಮೇಕೆ, ಅರ್ಧ - ಮನುಷ್ಯ ಜೀವಿ ಯಂತೆ ಯೋಚಿಸಲ್ಪಟ್ಟಿದೆ. ಬಹುಶಃ ಜನರು ಮನುಷ್ಯನು ಪ್ರಾಣಿಯ ಭಾಗವಾಗಿರಲು ಸಾಧ್ಯತೆಯಿದೆ ಎಂದು ಯೋಚಿಸುತ್ತಿದ್ದಿರಬಹುದು. ಆದರೆ ನಾವು ಹೆಚ್ಚು ಚೆನ್ನಾಗಿ ತಿಳಿದಿದ್ದೇವೆ. ಇಲ್ಲವೇ ನಾವು ತಿಳಿದಿರುವೆವೋ? ಮನುಷ್ಯನು ಒಂದು-ಕಣದ ಪ್ರಾಣಿಯ ಮೂಲದಿಂದ ಬಂದಿದ್ದಾನೆ ಮತ್ತು ಇತ್ತೀಚೆಗಿನಂತೆ ಬಾಲವಿಲ್ಲದ ಕೋತಿಯಂಥ ಪೂರ್ವಜ ಪ್ರಾಣಿಗಿಂತ ಹೆಚ್ಚಾಗಿರುವದಿಲ್ಲ ಎಂದು ಪರಿಣಾಮ ಸಿದ್ಧಾಂತವು ಹೇಳುತ್ತದೆ. ನಾವು ಈ ಸಿದ್ಧಾಂತವನ್ನು ಅಲ್ಲಗಳೆಯುತ್ತೇವೆ.

ಇದಲ್ಲದೇ ಪ್ರಾಣಿಗಳಿಗಿಂತ ಮನುಷ್ಯನು ಭಿನ್ನವಾದ ರೀತಿಯ ಜೀವಿಯಾಗಿದ್ದಾನೆಂದು ನಂಬುವದಕ್ಕೆ ಒಳ್ಳೇ ಕಾರಣವಿದೆ. ಮನುಷ್ಯನನ್ನು ವಿಶೇಷವಾಗಿ ಭಿನ್ನವಾಗಿಡುವಂಥದ್ದು ಏನಾಗಿದೆಯಂದರೆ, ಅವನು ದೇವರ ಸ್ವರೂಪದಲ್ಲಿ ಮಾಡಲ್ಪಟ್ಟದ್ದರಿಂದ ಅವನಿಗೆ ಉನ್ನತವಾದ ಉದ್ದೇಶವಿದೆ. "ನೀವು ಲೋಕದಲ್ಲಿ ದುರಾಶೆಯಿಂದುಂಟಾದ ಕೆಟ್ಟ ತನಕ್ಕೆ ತಪ್ಪಿಸಿಕೊಂಡು ದೈವಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂಬ ಉದ್ದೇಶ ದಿಂದ ದೇವರು ತನ್ನ ಪ್ರಭಾವ ಗುಣಾತಿಶಯಗಳಿಂದ ಅಮೂಲ್ಯವಾಗಿಯೂ ಉತ್ಕೃಷ್ಟ ವಾಗಿಯೂ ಇರುವ ವಾಗ್ದಾನಗಳನ್ನು ನಮಗೆ ದಯಪಾಲಿಸಿದ್ದಾನೆ" (2 ಪೇತ್ರ 1:4). ಜೀವನದಲ್ಲಿ ನಮ್ಮ ಉದ್ದೇಶವು ನಮ್ಮ ಮಾನವ ಸ್ವಭಾವವನ್ನು ತೃಪ್ತಿಪಡಿಸುವದಲ್ಲ,

ಆದರೆ ದೇವರ ಸ್ವಭಾವವನ್ನು ತೆಗೆದು ಕೊಳ್ಳುವದಕ್ಕೆ ಪ್ರಾರಂಭಿಸುವುದು, ಹೆಚ್ಚಾಗಿ ದೇವರಂತಾಗುವುದು ಆಗಿದೆ. ನಾವು ಕೇವಲ ಪ್ರಾಣಿಗಳಾಗಿರದಿದ್ದರೆ, ನಾವು ಏನು ಮಾಡಬೇಕು ಎಂದು ದೇವರು ಬಯಸುತ್ತಾನೆಂಬುದನ್ನು ಸಂಶೋಧಿಸಬಾರದೋ? ನಾವು ಧಾರ್ಮಿಕರಾಗಬಾರದೋ?

## ಯಾಕಂದರೆ ಬೈಬಲು ಒಂದು ಯಕ್ಷಣಿ ಕಥೆಯಾಗಿರುವದಿಲ್ಲ

ಬೈಬಲು ಯಕ್ಷಿಣಿ ಕಥೆಗಳ, ದಂತಕಥೆಗಳ, ಇಲ್ಲವೇ ಕಾಲ್ಪನಿಕ ಕಥೆಗಳ ಒಂದು ಸಂಗ್ರಹವಾಗಿರುವದಿಲ್ಲ. ಅದು ಹಾಗಿದೆಯೆಂದು ಅನೇಕ ಜನರು ನಂಬುತ್ತಾರೆ. ಬೈಬಲು ಕೆಲವೊಂದು ಸತ್ಯ, ಕೆಲವೊಂದು ತಪ್ಪು, ಕೆಲವೊಂದು ಘಟನೆ, ಕೆಲವೊಂದು ಇತಿಹಾಸ, ಕೆಲವೊಂದು ದಂತಕಥೆಯನ್ನು ಒಂದುಗೂಡಿಸಿದ ಮಾನವನ ಪ್ರಯತ್ನದ ಉತ್ಪತ್ತಿಯಂತೆ - ಅವರು ನೋಡುತ್ತಾರೆ.

ಈ ವಿಭಾಗದೊಂದಿಗೆ ಎರಡು ಸಂಗತಿಗಳು ತಪ್ಪಾಗಿರುತ್ತವೆ. ಒಂದು, ಬೈಬಲು ಅದನ್ನು ಅಲ್ಲಗಳೆಯುತ್ತದೆ. 2 ತಿಮೊಥೆ 3:16, 17 ಯೋಚಿಸಿರಿ: "ದೈವ ಪ್ರೇರಿತವಾದ ಪ್ರತಿಯೊಂದು ಲೇಖನವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿಶಿಕ್ಷೆಗೂ ಉಪಯುಕ್ತವಾಗಿದೆ. ಅದರಿಂದ ದೇವರ ಮನುಷ್ಯನು ಪ್ರವೀಣನಾಗಿ ಸಕಲ ಸತ್ಕಾರ್ಯಕ್ಕೆ ಸನ್ನದ್ಧನಾಗುವನು." ಬೈಬಲನ್ನು ಸ್ವೀಕರಿಸುವ ಯಾವುದೇ ಧರ್ಮವು ಈ ವಚನವನ್ನು ತೆಗೆದುಕೊಳ್ಳಬೇಕು ಯಾಕಂದರೆ ಅದು ಬೈಬಲು ಯಕ್ಷಣಿ ಕಥೆಗಳನ್ನು ಒಳಗೊಂಡಿರುವದಿಲ್ಲ ಎಂದು ಬೋಧಿಸುತ್ತದೆ. ಎರಡನೆಯದು, ಬೈಬಲು ಸತ್ಯದ ಮತ್ತು ತಪ್ಪಿನ ಮಿಶ್ರಣವಾಗಿದ್ದರೆ, ಆಗ ಬೈಬಲಿನ ಯಾವುದೇ ಭಾಗವನ್ನು ಪ್ರಶ್ನಿಸಲಾಗದಂಥ ಸತ್ಯವೆಂದು ಒಬ್ಬನು ನಂಬಲಾರನು. ಬಹಳ ನಿಶ್ಚಿತವಾಗಿ ನಂಬಿದ ಸತ್ಯಗಳೂ ಸಹ, ಉದಾಹರಣೆಯಾಗಿ ಕ್ರಿಸ್ತನ ದೈವತ್ವವು, ಸಹ ಸತ್ಯವಾಗಿರದೇ ಇರುವ ಸಾಧ್ಯತೆ ಯಿರುವುದು.

ಬೈಬಿಲು ಯಕ್ಷಣಿ ಕಥೆಯಾಗಿರದೇ ಇರುವದರಿಂದ, ಅದನ್ನು ಓದಲು ಮತ್ತು ಅರ್ಥಮಾಡಿಕೊಳ್ಳಲು ಹಾಗೂ ಅದಕ್ಕೆ ವಿಧೇಯರಾಗಲು ಪ್ರಾರಂಭಿಸಿರಿ. ಧಾರ್ಮಿಕತೆಯುಳ್ಳವರಾಗಿ ಪ್ರಾರಂಭಿಸಿರಿ.

## ಯಾಕಂದರೆ ಧರ್ಮವು ಕೇವಲ "MATESHIP" ಆಗಿರುವದಿಲ್ಲ

"Mateship" ಎಂಬುದು ಆಸ್ಟ್ರೇಲಿಯನ್ ವ್ಯಕ್ತಪಡಿಸುವಿಕೆಯಾಗಿದೆ. ಒಬ್ಬನ "ಸಂಗಾತಿ" ಇಲ್ಲವೇ ಸ್ನೇಹಿತರು ಆಸ್ಟ್ರೇಲಿಯದಲ್ಲಿ ಯಿರುವವರಿಗೆ ಮುಖ್ಯವಾದ ವರಾಗಿರುತ್ತಾರೆ, ಕೆಲವು ಸಲ ಅವನ ಹೆಂಡತಿ ಇಲ್ಲವೇ ಕುಟುಂಬಕ್ಕಿಂತ ಹೆಚ್ಚು ಮಹತ್ವದ್ದಾಗಿರುತ್ತದೆ. "Mateship" ಅಂದರೆ ನಿಮ್ಮ ಸ್ನೇಹಿತರುಗಳನ್ನು ನೋಡಿ ಕೊಳ್ಳುವುದು ಇಲ್ಲವೇ ಜೊತೆ ಆಸ್ಸೀಸರನ್ನು ನೋಡಿಕೊಳ್ಳುವುದು, ವಿಶೇಷವಾಗಿ ಅವರು ತೊಂದರೆಯಲ್ಲಿರುವಾಗ ಅವರ ಅಗತ್ಯತೆಗಳನ್ನು ಕೊಡುವುದು ಆಗಿರುತ್ತದೆ.

ಆಸ್ಟ್ರೇಲಿಯನ್‌ರು ಇತರರಿಗೆ ಸಹಾಯಮಾಡಲು ಹಣಕೊಡುವದರಲ್ಲಿ ಉದಾರಿಗಳಾಗಿರುವರೆಂದು ನಾವು ಕಂಡುಕೊಂಡಿದ್ದೇವೆ - ಉದಾಹರಣೆಯಾಗಿ, ಅರಣ್ಯ ಬೆಂಕಿನಲ್ಲಿ ಸುಟ್ಟುಹೋದ ಮನೆಗಳನ್ನು ಪುನಃ ಕಟ್ಟಲು ಜನರಿಗೆ ಸಹಾಯ ಮಾಡುತ್ತಾರೆ. ಅದು ಒಳ್ಳೆಯದಾಗಿದೆ. ಹಾಗಿದ್ದರೂ, ಹೆಚ್ಚಾದ ಜನರು ಧರ್ಮವು ಇದೆಲ್ಲವನ್ನಷ್ಟೇ ಎಂದು ಭಾವಿಸಿದ್ದು ಸಮಸ್ಯೆಯಾಗಿದೆ. "ನಾನು ಇತರರಿಗೆ ಒಳ್ಳೆ ಯದನ್ನು ಮಾಡುವವರೆಗೆ," "ದೇವರು ಅಷ್ಟನ್ನೇ ಬಯಸುವುದು ಎಲ್ಲವೂ ಆಗಿದೆ"

ಎಂದು ಅವರು ಯೋಚಿಸಿದರು. "ನಾನು ಇತರ ಜನರನ್ನು ಸರಿಯಾಗಿ ಸತ್ಕರಿಸಿದರೆ, ಆಕೆ ಸರಿಯಾದ ಸಂಗಾತಿಯಾಗಿರುವಳು" ಎಂಬುದು ಅವರ ತತ್ವಜ್ಞಾನ ಆಗಿತ್ತು.

ಅಂಥ ಜನರನ್ನು ನೀನು ತಿಳಿದಿರುವಿ, ನಿನಗೆ ತಿಳಿದಿರುವದಿಲ್ಲವೋ? ಅವರು ಹಣ ಕೊಟ್ಟು ಜನರಿಗೆ ಸಹಾಯಮಾಡಿದರೆ ಅವರು ಚರ್ಚಿಗೆ ಹೋಗುವ ಅವಶ್ಯಕತೆಯಿಲ್ಲ ಇಲ್ಲವೇ ದೇವರ ಇತರ ಆಜ್ಞೆಗಳನ್ನು ಕೈಕೊಳ್ಳುವ ಅಗತ್ಯತೆಯಿಲ್ಲ ಎಂದು ಅವರು ನಂಬುತ್ತಾರೆ.

ನಾವು ಇತರರಿಗೆ ಒಳ್ಳೆಯವರಾಗಿರಬೇಕೆಂದು ದೇವರು ನಿರೀಕ್ಷಿಸುತ್ತಾನೆ. (ನೋಡಿರಿ ಮತ್ತಾಯ 7:12.) ಹಾಗಿದ್ದರೂ, ಆತನು *ನಿರೀಕ್ಷಿಸುವಂಥದ್ದೆಲ್ಲವೂ* ಅಷ್ಟೇ ಅಲ್ಲ "ನಿನ್ನ ನೆರೆಯವನನ್ನು ಪ್ರೀತಿಸು" ಎಂಬುದು ಎರಡನೆಯ ಆಜ್ಞೆಯಿದ್ದರೂ *ಎಲ್ಲರೊಂದಿಗೆ* ದೇವರನ್ನು ಪ್ರೀತಿಸಬೇಕು ಎಂಬುದು ಮೊದಲನೆಯ ಆಜ್ಞೆಯಾಗಿದೆ (ಮಾರ್ಕ 12:30, 31). ಕ್ರೈಸ್ತ ಧರ್ಮವು ಇತರರಿಗೆ ಕೇವಲ ಸಹಾಯ ಮಾಡುವದಷ್ಟೇ ಆಗಿರುವದಿಲ್ಲ, ಅದು ಕೃಪೆಯಿಂದ ರಕ್ಷಿಸಲ್ಪಡುವುದು ಆಗಿದೆ! ನಮ್ಮ ಧರ್ಮದ ಮುಖ್ಯ ಅಂಶವನ್ನು ಪೌಲನು ವಿವರಿಸಿದನು: "ನಾವು ಮಾಡಿದ ಪುಣ್ಯಕ್ರಿಯೆಗಳ ನಿಮಿತ್ತದಿಂದಲ್ಲ ಆತನ ಕರುಣೆಯಲ್ಲಿಯೇ ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮೂಲಕವಾಗಿಯೂ ಪರಿಶುದ್ಧಾತ್ಮನು ನಮ್ಮಲ್ಲಿ ನೂತನಸ್ವಭಾವವನ್ನು ಉಂಟುಮಾಡುವದರ ಮೂಲಕ ವಾಗಿಯೂ ಆತನು ನಮ್ಮನ್ನು ರಕ್ಷಿಸಿದನು" (ತೀತ 3:5). ಕ್ರೈಸ್ತತ್ವವು ರಕ್ಷಣೆಯ ಬಗ್ಗೆ ಇರುತ್ತದೆ, ಮತ್ತು ನೀವು ಕೇವಲ ಒಳ್ಳೆಯದನ್ನು ಮಾಡುವದರಿಂದ ರಕ್ಷಿಸಲ್ಪಡಲಾರಿರಿ. ನೀವು ದಯೆಯಿಂದ ರಕ್ಷಿಸಲ್ಪಡತಕ್ಕದ್ದು. ಅಂದರೆ ನೀವು ನಿಮ್ಮ ಧಾರ್ಮಿಕ ಸ್ಥಿತಿಯನ್ನು ನೋಡುತ್ತಾ ಪ್ರಾರಂಭಿಸಬೇಕು.

## ಯಾಕಂದರೆ ಯೇಸುವು ಕೇವಲ "ಸಾಧು ಸ್ವಭಾವದವನೂ ಸೌಮ್ಯನೂ" ಆಗಿರುವದಿಲ್ಲ

ಕೆಲವರು ಕ್ರಿಸ್ತನಲ್ಲಿ ನಂಬಿಕೆಯಿಡುತ್ತಾರೆ, ಆದರೆ ಆತನನ್ನು ಸಂಪೂರ್ಣವಾಗಿ "ಸಾಧು ಸ್ವಭಾವದವನೂ ಸೌಮ್ಯನೂ" ಆಗಿರುವಂತೆ ನೋಡುತ್ತಾರೆ. ಅವರಿಗೆ ಆತನು ಯಾರನ್ನೂ ದಂಡಿಸದಷ್ಟು ಒಳ್ಳೆಯವನೂ ದಯೆಯುಳ್ಳವನೂ ಪ್ರೀತಿಸುವವನೂ ಆಗಿರುತ್ತಾನೆ. ಆದುದರಿಂದ, ಅವರು ಆತನ ಚಿತ್ತವನ್ನು ನೆರವೇರಿಸುವದಕ್ಕಾಗಿ ಯೋಚಿಸುವದಿಲ್ಲ. ಅವರು ಹಾಗೆ ಮಾಡದಿದ್ದರೆ, ಆತನು ಹೇಗೂ ಅವರನ್ನು ದಂಡಿಸುವದಿಲ್ಲ ಎಂದು ಅವರು ಯೋಚಿಸುತ್ತಾರೆ.

ಯೇಸುವು "ಸಾಧು ಸ್ವಭಾವದವನೂ ದೀನತೆಯುಳ್ಳವನೂ" ಆಗಿದ್ದಾಗ್ಯೂ, ಆತನ ಸ್ವಭಾವದ ಇನ್ನೊಂದು ಭಾಗವು ಅಸ್ತಿತ್ವದಲ್ಲಿರುತ್ತದೆ - ಕೆಲವರು ಅದನ್ನು ಯೇಸುವಿನ "ಕೋಪದ ಉತ್ತರ ಭಾಗ" ಎಂದು ಕರೆದಿದ್ದಾರೆ. ಉದಾಹರಣೆಯಾಗಿ ಯೋಹಾನ 8:24ರ ಬಗ್ಗೆ ಯೋಚಿಸಿರಿ: "ಆದುದರಿಂದ ನೀವು ನಿಮ್ಮ ಪಾಪಗ ಳಲ್ಲಿಯೇ ಸಾಯುವಿರೆಂದು ನಿಮಗೆ ಹೇಳಿದೆನು: ನನ್ನನ್ನು ಆತನೆಂದು ನೀವು ನಂಬದೆ ಹೋದರೆ ನಿಮ್ಮ ಪಾಪಗಳಲ್ಲಿಯೇ ಸಾಯುವಿರಿ." ಪಾಪವು ಅಸ್ತಿತ್ವದಲ್ಲಿದೆಯೆಂದು ಯೇಸು ನಂಬಿದನು. ಪಾಪದ ಪರಿಣಾಮವಾಗಿ ಮರಣ ಬರುವುದೆಂದು, ಶಿಕ್ಷೆಯಲ್ಲಿ ಯೇಸುವು ನಂಬಿದ್ದನು. ಕೆಲವರು ಶಿಕ್ಷಿಸಲ್ಪಡುವರೆಂದು ಆತನು ಹೇಳಿದನು. ಹೇಳಲ್ಪಟ್ಟ ಶರತ್ತುಗಳನ್ನು ಪೂರೈಸದಿದ್ದರೆ ದಂಡನೆಯಲ್ಲಿ ಪರಿಣಾಮಗೊಳ್ಳುವವೆಂದು ಹೇಳಿದನು. ತಪ್ಪಿ ಹೋಗುವದರಿಂದ ಉಳಿದು ಕೊಳ್ಳುವದಕ್ಕಾಗಿ ದೇವರಿಗೆ ವಿಧೇಯರಾಗುವ

ಅಗತ್ಯತೆಯಿದೆ ಎಂದೂ ಯೇಸು ಹೇಳಿದನು (ನೋಡಿರಿ ಮತ್ತಾಯ 7:21). ಹಾಗಾದರೆ, ಯೇಸುವು ದಂಡಿಸುವನು ಹಾಗೂ ದಂಡಿಸಬಲ್ಲವನಾದರೆ, ನಾನು ಆತನ ಚಿತ್ತವನ್ನು ಮಾಡತಕ್ಕದ್ದು, ಮತ್ತು ಧಾರ್ಮಿಕತೆಯಿಂದ ಇರಬೇಕೆಂದು ನಾನು ಹೇಳಿದ್ದರ ಅರ್ಥವೂ ಇದೇ ಆಗಿದೆ.

## ಯಾಕಂದರೆ ವಿಶ್ವಾಸವು ಒಂದು ಮಂತ್ರದ ರಸಾಯನವಾಗಿರುವದಿಲ್ಲ

ನೀವು ಯೇಸುವಿನಲ್ಲಿ ನಂಬಿಕೆಯಿಟ್ಟರೆ ಮಾತ್ರ ಎಲ್ಲವೂ ಸರಿಯಾದದ್ದಾಗುವದೆಂಬುದು ಪ್ರಸಿದ್ಧವಾದ ಸಿದ್ಧಾಂತವಾಗಿದೆ. ನೀವು ರಕ್ಷಿಸಲ್ಪಡಬೇಕಾದರೆ ಮಾಡತಕ್ಕದ್ದು ವಿಶ್ವಾಸವುಳ್ಳವರಾಗಿರುವುದು. ಯೇಸುವು ಕರ್ತನಾಗಿದ್ದಾನೆಂದು ಒಪ್ಪಿಕೊಳ್ಳಿರಿ, ಆತನ ದೈವತ್ವದಲ್ಲಿ ನಂಬಿಕೆಯಿಡಿರಿ ಮತ್ತು ನೀವು ಬೇರೆ ಯಾವುದನ್ನಾದರೂ ಮಾಡಿದ್ದರೂ ಮಾಡದೇ ಇದ್ದರೂ ಸಂಬಂಧಿಸದೇ ನೀವು ರಕ್ಷಿಸಲ್ಪಡುವಿರಿ.

ಆದರೆ ವಿಶ್ವಾಸವು *ಮಾತ್ರವೇ* ರಕ್ಷಿಸಲಾರದು (ಯಾಕೋಬ 2:24). ವಿಶ್ವಾಸವು ಅಗತ್ಯವಾಗಿದೆ (ಯೋಹಾನ 3:16). ಆದರೆ ರಕ್ಷಿಸುವ ನಂಬಿಕೆಯು ಪ್ರೀತಿಯ ಮುಖಾಂತರ ಕಾರ್ಯಮಾಡುವ ವಿಶ್ವಾಸವಾಗಿದೆ (ಗಲಾತ್ಯ 5:6). ಯೇಸುವು ದೇವರ ಕುಮಾರನಾಗಿದ್ದಾನೆಂದು ನಂಬಲು ಪ್ರಾರಂಭಿಸಿದ ಕ್ಷಣದಲ್ಲಿಯೇ ನೀವು ರಕ್ಷಿಸಲ್ಪಡುವುದಿಲ್ಲ. ಸಂಗತಿಯನ್ನು ನಂಬಿದ ನಂತರ ನಿಮ್ಮ ವಿಶ್ವಾಸವು ಆತನ ಚಿತ್ತಕ್ಕೆ ವಿಧೇಯರಾಗುವಂತೆ ನಿಮ್ಮನ್ನು ನಡಿಸತಕ್ಕದ್ದು, ನೀವು ದೇವರ ಚಿತ್ತವನ್ನು ಮಾಡಿದ ನಂತರ, ನಿಮ್ಮ ನಂಬಿಕೆಯ ನಿಮಿತ್ತ, ಆಗ ನೀವು ರಕ್ಷಿಲ್ಪಡುವಿರಿ ಆದರೆ ಅದಕ್ಕಿಂತ ಮೊದಲು ಅಲ್ಲ. ಅಪೊಸ್ತಲರ ಕೃತ್ಯಗಳು 2ರಲ್ಲಿ ಕ್ರಿಸ್ತನನ್ನು ಕುರಿತ ಪೇತ್ರನ ಪ್ರಸಂಗವನ್ನು ಕೆಲವರು ನಂಬಿದರು. ಯೇಸುವು ನಿಜವಾಗಿ ಕರ್ತನೂ ಕ್ರಿಸ್ತನೂ ಆಗಿದ್ದಾನೆಂದು ಅವರು ನಂಬಿದರು. ಆದುದರಿಂದ ಅವರು, "ನಾವೇನು ಮಾಡಬೇಕು?" ಎಂದು ಕೇಳಿದರು, ಪೇತ್ರನು ಯೆಹೂದ್ಯರಿಗೆ ಅವರು ಅಗತ್ಯವಾಗಿ ಮಾಡಿದ್ದನ್ನು ಮಾಡಿದ್ದಾರೆ ಮತ್ತು ಈಗಾಗಲೇ ರಕ್ಷಿಸಲ್ಪಟ್ಟಿದ್ದಾರೆ ಎಂದು ಹೇಳಲಿಲ್ಲ. ಈ *ವಿಶ್ವಾಸಿಗಳಿಗೆ* ಅವನು ಹೀಗೆ ಹೇಳಿದನು: "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ಬಾಪ್ತಿಸ್ಮ ಮಾಡಿಸಿಕೊಳ್ಳಿರಿ, ಆಗ ನೀವು ಪರಿಶುದ್ಧಾತ್ಮನ ದಾನವನ್ನು ಹೊಂದುವಿರಿ" (ಅಪೊಸ್ತಲರ ಕೃತ್ಯಗಳು 2:38). ವಿಶ್ವಾಸವು ಮಾತ್ರವೇ ಸಾಕಾಗದು; ಮಾನಸಾಂತರ ಮತ್ತು ಬಾಪ್ತಿಸ್ಮ ಸಹ ಅವಶ್ಯವಾಗಿದೆ. ನಾವು ಆತನಿಗೆ ವಿಧೇಯರಾಗಬೇಕಾಗಿರುವದರಿಂದ, ಧಾರ್ಮಿಕತೆ ಯುಳ್ಳವರಾಗಿರಲು ಅದು ಒಂದು ಒಳ್ಳೆಯ ಕಾರಣವಾಗಿದೆ.

## ಯಾಕಂದರೆ ದೇವರು ಸಾಂತಾಕ್ಲಾಜನಂತಿರುವದಿಲ್ಲ

ಕ್ರಿಸ್ತಜಯಂತಿಯ ಸಮಯದಲ್ಲಿ ಜನರಿಗೆ ಬಹುಮಾನಗಳನ್ನು ತರುವನೆಂದು ತಿಳಿದ, ದಂತ ಕಥೆಯ ಬಿಳಿಗಡ್ಡ ಮೀಸೆಗಳ ಮುದುಕ ಸಾಂತಾಕ್ಲಾಜನೊಂದಿಗೆ ದೇವರಿಗೆ ಬಹಳ ಸಾಮಾನ್ಯವಾದದ್ದು ಇದೆ ಎಂದು ಕೆಲವರು ಯೋಚಿಸಲು ಶೋಧಿಸಲ್ಪಡುತ್ತಾರೆ. ಸಾಂತಾಕ್ಲಾಜನು ಕೇವಲ ಒಳ್ಳೇ ಮಕ್ಕಳಿಗೆ ಮಾತ್ರವೇ ಬಹುಮಾನಗಳನ್ನು ತರುವನೆಂದು ತಿಳಿಯಲ್ಪಟ್ಟಾಗ್ಯೂ, ವರ್ಷವೆಲ್ಲಾ ಎಷ್ಟು ತುಂಟರಾಗಿದ್ದರೂ ನಮ್ಮ ಅನೇಕ ಬಾಲಕ, ಬಾಲಕೀಯರನ್ನು ಅವನು ತಪ್ಪಿಸಿಕೊಳ್ಳುವದಿಲ್ಲ ಎಂಬುದನ್ನು ನಾವು ತಿಳಿದಿದ್ದೇವೆ. ಸಾಂತಾ ಕೇಳುವದಿಲ್ಲ, ಹೇಗೂ ಸಾಂತಾ ಮಗುವಿನ ತುಂಟತನವನ್ನು

ಕಡೆಗಣಿಸಲು ಮಾರ್ಗ ಕಂಡುಕೊಳ್ಳುತ್ತಾನೆ ಮತ್ತು ಕ್ರಿಸ್ತ ಜಯಂತಿಯ ಸಮಯದಲ್ಲಿ ಬಹುಮಾನಗಳನ್ನು ಕೊಡುತ್ತಾನೆ.

ದೇವರು ಹಾಗಿರುವನೆಂದು ನಾವು ಯೋಚಿಸುತ್ತೆವೆಯೋ? ಜೀವನದಲ್ಲಿ ಒಳ್ಳೆಯ ವರಾಗಿರುವವರಿಗೆ ಮಾತ್ರ ಬಹುಮಾನ ಕೊಡುವನೆಂದು ನಾವು ಊಹಿಸುತ್ತೇವೆ. ಆದರೆ, ಹೇಗೂ, ಪ್ರತಿಯೊಬ್ಬನು ಜೀವನದಲ್ಲಿ ಎಷ್ಟು ಒಳ್ಳೆಯವನಾಗಿರಲಿ ಇಲ್ಲವೇ ಎಷ್ಟು ಕೆಟ್ಟವನಾಗಿರಲಿ ಎಂಬುದನ್ನು ಲೆಕ್ಕಿಸದೇ ಪ್ರತಿಯೊಬ್ಬನಿಗೆ ಬಹುಮಾನ ಕೊಡಲು ಆತನು ಮಾರ್ಗ ಕಂಡು ಕೊಳ್ಳುವನೆಂದು ನಾವು ಯೋಚಿಸುತ್ತೇವೆ, "ನರಿಗಳ ಗುದ್ದುಗಳಲ್ಲಿ ನಾಸ್ತಿಕರಿರುವದಿಲ್ಲ" ಎಂಬ ಹೇಳಿಕೆಯಿರುತ್ತದೆ. ಪ್ರಸಂಗಿಗೆ ಮತ್ತು ಬಂಧುಗಳಿಗೆ ಕಿವಿಗೊಡುವದಕ್ಕಾಗಿ, ನಾವು ಇದನ್ನು ಕೂಡಿಸಬಹುದು: "ಶವ ಪೆಟ್ಟಿಗೆಗಳಲ್ಲಿ ಪರಮ ಪಾಪಿಗಳಿರುವದಿಲ್ಲ." ಮನುಷ್ಯನು ಜೀವನದಲ್ಲಿ ಎಷ್ಟೋ ಕೆಟ್ಟವನಾಗಿದ್ದರೂ, ಅವನು ಸಾಯುವಾಗ ಅವನನ್ನು ಕ್ಷಮಿಸಿ ಪರಲೋಕದಲ್ಲಿ ಅವನಿಗೆ ಒಂದು ಸ್ಥಾನಕೊಡಲು ದೇವರು ಒಂದು ಮಾರ್ಗವನ್ನು ಕಂಡುಕೊಳ್ಳುವನೆಂದು ನಾವು ಯಾವಾಗಲೂ ನಂಬುವಂತೆ ತೋರುತ್ತದೆ. ದೇವರನ್ನು ಒಳ್ಳೇ ಪ್ರಾಯಸ್ಥನಂತೆ, ಅಜ್ಜನಂತೆ, "ನೀನು ಹಠಹಿಡಿದರೆ ಹೋಗು, ಅದನ್ನು ಮಾಡು; ಅದೆಲ್ಲವೂ ಸರಿಯಾಗುವುದು. ನಾನು ನಿನ್ನನ್ನು ಕ್ಷಮಿಸುವೆನು" ಎಂದು ಯಾವಾಗಲೂ ಹೇಳುವಾತನಂತೆ ದೇವರ ಬಗ್ಗೆ ನಾವು ಯೋಚಿಸುತ್ತೇವೆ.

ದೇವರು ಹಾಗಿರುವದಿಲ್ಲ! ದೇವರು ಒಳ್ಳೆಯವನೂ ಪ್ರೀತಿಸುವಾತನೂ ಆಗಿದ್ದಾನೆ. ಆದರೆ ದೇವರು ಅದಕ್ಕಿಂತ ಹೆಚ್ಚಾಗಿದ್ದಾನೆ. ದೇವರು ನ್ಯಾಯವಂತನಾಗಿದ್ದಾನೆ! ಮತ್ತು ದೇವರ ನ್ಯಾಯವು ಆತನು ಕೃಪಾಳವೂ ಕ್ಷಮಿಸುವಾತನೂ ಆಗಿರುವಂತೆ ಕೆಲವು ಸಲ ಕಠಿಣನೂ ದಂಡಿಸುವಾತನೂ ಆಗಿರುವಂತೆ ಮಾಡುತ್ತದೆ. "ದೇವರ ದಯೆಯನ್ನೂ ಕಾಠಿಣ್ಯವನ್ನೂ" ಕುರಿತು ಬೈಬಲು ಮಾತಾಡುತ್ತದೆ (ರೋಮಾಪುರ 11:22). "ಜೀವಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿ ಬೀಳುವುದು ಭಯಂಕರ ವಾದದ್ದು" (ಇಬ್ರಿಯ 10:31) ಎಂದು ಅದು ಹೇಳುತ್ತದೆ. ನೀನು ನಿನ್ನ ಮನಸ್ಸಿಗೆ ಬಂದದ್ದನ್ನು ಮಾಡಿ ಅದರೊಂದಿಗೆ ತಪ್ಪಿಸಿಕೊಂಡು ಹೋಗಲಿಕ್ಕಾಗುವದಿಲ್ಲ ಯಾಕಂದರೆ ದೇವರು ನ್ಯಾಯವಂತನು, ಮಾನಸಾಂತರ ಪಡದ ಮತ್ತು ಕ್ಷಮಿಸಲ್ಪಡದ ಪಾಪಿಗಳನ್ನು ಆತನು ಶಿಕ್ಷಿಸತಕ್ಕದ್ದು ಹಾಗೂ ಆತನು ಶಿಕ್ಷಿಸುವನು ಆದುದರಿಂದ, ಧಾರ್ಮಿಕತೆಯುಳ್ಳವರಾಗಿರಿ!

## ಯಾಕಂದರೆ ಮರಣವು ಅಂತ್ಯವಾಗಿರುವದಿಲ್ಲ

ಮನಷ್ಯನು ಮುದಿನಾಯಿ ರೋವರನಂತಿರುವನು - ಅವನು ಸತ್ತಾಗ ಸತ್ತೇ ಹೋಗಿರುವನು ಎಂದು ನಂಬುತ್ತಾರೆ. ಇದು ಸತ್ಯವಾಗಿದ್ದರೆ, ಆಗ ಧಾರ್ಮಿಕತೆಯುಳ್ಳ ವರಾಗಿರುವ ಅಗತ್ಯತೆ ಇರುವದಿಲ್ಲ. ಸಮಾಧಿಯನ್ನು ದಾಟಿ ಲೆಕ್ಕಾ ಹಾಕುವುದು ಇಲ್ಲದ್ದರಿಂದ ಜೀವನದಲ್ಲಿ ಆನಂದಿಸಬಹುದು ಹಾಗೂ ಒಳ್ಳೇ ಸಮಯ ಅನುಭವಿಸಬಹುದು. ದೇವರ ಚಿತ್ತವನ್ನು ಮಾಡುವದರ ಬಗ್ಗೆ ಚಿಂತಿಸಲು ಕಾರಣವಿಲ್ಲ ಎಂದು ಅವರು ನಂಬುವರು.

ಆದರೆ ಮರಣವು ನಮ್ಮ ಅಸ್ತಿತ್ವವನ್ನು ಅಂತ್ಯಗೊಳಿಸುವದಿಲ್ಲ, ಸಮಾಧಿಯನ್ನು ದಾಟಿ ನಾವು ಜೀವಿಸುತ್ತೇವೆ. "ಒಂದೇ ಸಾರಿ ಸಾಯುವುದೂ ಆ ಮೇಲೆ ನ್ಯಾಯ ತೀ ರ್ಪೂ ಮನುಷ್ಯರಿಗೆ ಹೇಗೆ ನೇಮಕವಾಗಿದೆ" ಎಂದು ಬೈಬಲ್ ಹೇಳುತ್ತದೆ (ಇಬ್ರಿಯ 9:27). ಮರಣದ ನಂತರ, ನ್ಯಾಯತೀರ್ಪಿಕೆಯು *ಬರುವುದು* ಅದರಲ್ಲಿ ನಾವೆಲ್ಲರೂ ದೇವರ ಮುಂದೆ ನಿಂತುಕೊಂಡು ಈ ದೇಹದಲ್ಲಿ ನಾವು ಮಾಡಿದ್ದರ ಲೆಕ್ಕ ಕೊಡಬೇಕು.

ನಮಗೆ ನ್ಯಾಯತೀರ್ಪಾಗುವುದು ನಾವು ನಿತ್ಯತ್ವವನ್ನು ಪರಲೋಕದಲ್ಲಿ ಇಲ್ಲವೇ ನರಕದಲ್ಲಿ *ಕಳೆಯುವೆವು.* ದೇವರ *ಚಿತ್ತವನ್ನು* ಮಾಡಲು ಇಲ್ಲವೇ ಧಾರ್ಮಿಕತೆಯುಳ್ಳವರಾಗಿರಲು ಪ್ರಾರಂಭಿಸಲಿಕ್ಕೆ ಅದು ಸಾಕಾದಷ್ಟು ಕಾರಣವಾಗುವದಿಲ್ಲವೇ?

## ಯಾಕಂದರೆ ನೀನು (ಸೂಪರ್ ಮ್ಯಾನ್) ಅತಿ ಮಾನವನಂತಿರುವದಿಲ್ಲ

ತಾನು ಕಳೆದುಹೋಗಿದ್ದೇನೆ ಎಂದು ತಿಳಿದಿರುವ ಮತ್ತು ರಕ್ಷಿಸಲ್ಪಡಲು ಏನು ಮಾಡಬೇಕೆಂದು ತಿಳಿದಿರುವ ಆದರೆ ಭವಿಷ್ಯದಲ್ಲಿ ಒಂದು ದಿನ ಕಾರ್ಯಮಾಡುವದನ್ನು ಯೋಚಿಸಿರುವ ಮನುಷ್ಯನ ಬಗ್ಗೆ ಯೋಚಿಸಿರಿ. "ಬಹುಶಃ ಮುಂದಿನ ವಾರ, ಮುಂದಿನ ತಿಂಗಳ ಇಲ್ಲವೇ ಮುಂದಿನ ವಾರ. ಆಗ ನಾನು ಕ್ರಿಸ್ತನ ಬಳಿಗೆ ಬರುವೆನು ಮತ್ತು ದೇವರಿಗೆ ಸೇವೆ ಮಾಡಲು ಪ್ರಾರಂಭಿಸುವೆನು. ಆಗ ನಾನು ಧಾರ್ಮಿಕನಾಗುವೆನು" ಎಂದು ಹೇಳುವನು. ಅವನು ತಾನು ಅತಿಮಾನವನಾಗಿದ್ದಾನೆ ಮತ್ತು ತನ್ನ ಜೀವನದ ಮೇಲೆ ಮತ್ತು ಸಂದರ್ಭಗಳಮೇಲೆ ಸಂಪೂರ್ಣ ನಿಯಂತ್ರಣವಿದೆಯೆಂದು ಯೋಚಿಸುತ್ತಿರುವಂತೆ ಕಾಣುತ್ತದೆ. ಸಮಯವನ್ನು, ಜೀವನವನ್ನು, ರೋಗವನ್ನು ಮತ್ತು ಮರಣವನ್ನು ತಾನು ಆಜ್ಞಾಪಿಸಬಹುದು ಎಂದು ಯೋಚಿಸುತ್ತಾನೆ. ಯಾವುದೂ ಅವನು ಚಿಂತಿಸುವಂತೆ ಮಾಡುವದಿಲ್ಲ. ಕಠಿಣವಾದ ಕಾಯಿಲೆ? ಇಲ್ಲ. ಅವನು ರೋಗಿಯಾಗುವದಿಲ್ಲ - ಮತ್ತು ಅಪಘಾತ? ಇಲ್ಲ, ತನಗೆ ಯಾವುದೇ ಅಪಘಾತ ಸಂಭವಿಸುವದಿಲ್ಲ ಎಂದು ತನಗೇ ದೃಢಪಡಿಸಿಕೊಳ್ಳುತ್ತಾನೆ. ಅನಾಹುತ? ಸಮಸ್ಯೆಯಿಲ್ಲ; ಕ್ಷಣದಲ್ಲಿಯೇ ಅನಾಹುತವನ್ನು ನಿವಾರಿಸುತ್ತಾನೆ. ಬೇಗನೇ ಇಲ್ಲವೇ ಅಕಾಲಿಕ ಮರಣ? ಅದರ ಬಗ್ಗೆ ಅವನು ಚಿಂತಿಸಬೇಕಾಗಿಯೇ ಇರುವದಿಲ್ಲ. ಎಲ್ಲಕ್ಕಿಂತಲೂ ಹೆಚ್ಚಾಗಿ, ತಾನು ಮಾಡಬೇಕೆಂದು ಉದ್ದೇಶಿಸುವ ಎಲ್ಲಾ ಒಳ್ಳೇ ಸಂಗತಿಗಳನ್ನು - ಕ್ರೈಸ್ತನಾಗುವಂಥ ಸಂಗತಿಗಳನ್ನು ಮಾಡಲು ದೀರ್ಘ ಸಮಯದವರೆಗೆ ಜೀವಿಸುವನೆಂಬ ಭರವಸೆಯುಳ್ಳವನಾಗಿದ್ದಾನೆ.

ನನ್ನ ಸ್ನೇಹಿತನೇ, ಅದರಂತೆ ನೀನು ಯೋಚಿಸುತ್ತಿದ್ದರೆ, ನೀನು ನಿನ್ನನ್ನೆ ಮೋಸಪಡಿಸಿಕೊಳ್ಳುತ್ತಿರುವಿ. "ನಾಳೇ ಏನಾಗುವದೋ ನಿಮಗೆ ತಿಳಿಯದು. ನಿಮ್ಮ ಜೀವಮಾನವು ಎಂಥದು? ನೀವು ಸ್ವಲ್ಪ ಹೊತ್ತು ಕಾಣಿಸಿಕೊಂಡು ಆ ಮೇಲೆ ಕಾಣದೇ ಹೋಗುವ ಹಬೆಯಂತಿರುತ್ತೀರಿ" (ಯಾಕೋಬ 4:13ಸಿ-14) ಎಂದು ಯಾಕೋಬನು ಹೇಳುತ್ತಾನೆ. ಯಾವನೂ ಅತಿಮಾನವನಾಗಿರುವದಿಲ್ಲ. ರೋಗವು ಅಪಘಾತಗಳು ಅನಾಹುತಗಳು ಇಲ್ಲವೇ ಅಕಾಲಿಕ ಮರಣವು ಅವನಿಗೂ ಅವನ ಉದ್ದೇಶಗಳ ನೆರವೇರಿಕೆಯ ಮಧ್ಯದಲ್ಲಿ ಬರುವದಿಲ್ಲ ಎಂಬ ಭರವಸೆಯು ಯಾರಿಗೂ ಇರುವದಿಲ್ಲ. ನೀನು ಅತಿಮಾನವನಾಗಿರುವದಿಲ್ಲ. ಕ್ರಿಸ್ತನ ಕಡೆಗೆ ತಿರುಗಲಿಕ್ಕೆ ಸಾಕಷ್ಟು ಸಮಯ ಇರುವುದೆಂದು ದೃಢಪಡಿಸಿಕೊಳ್ಳಲು ಒಂದೇ ಒಂದು ನಿಶ್ಚಿತವಾದ ಮಾರ್ಗವು ಇಂದು ಆತನ ಬಳಿಗೆ ಬರುವಂಥದ್ದು. ಕ್ರಿಸ್ತನನ್ನು ಆತನ ಮಾರ್ಗದಲ್ಲಿ ಸ್ವೀಕರಿಸು ಮತ್ತು ಇಂದು ಧಾರ್ಮಿಕತೆಯುಳ್ಳವನಾಗಿರು.

## ಯಾಕಂದರೆ, ಮನುಷ್ಯನು ಗುಣಪಡಿಸಲಾಗದ ಧಾರ್ಮಿಕನಾಗಿದ್ದಾನೆ

ಮನುಷ್ಯನು ಗುಣಪಡಿಸಲಾಗದ ಧಾರ್ಮಿಕನಾಗಿದ್ದಾನೆ. ಅಂದರೆ ನೀನು ಧಾರ್ಮಿಕತೆಯುಳ್ಳವನಾಗಿರು ಎಂದು ನಿನ್ನನ್ನು ಒತ್ತಾಯಿಸುವುದು, ಒಂದು ಅರ್ಥದಲ್ಲಿ ಪುನಃ ಹೇಳಿದಂತಾಗುತ್ತದೆ, ಯಾಕಂದರೆ ನೀನು ಈಗಾಗಲೇ ಧಾರ್ಮಿಕನಾಗಿದ್ದೀ.

ಇದನ್ನು ರೋಮಾಪುರ 1ರಿಂದ ಉದಾಹರಿಸಬಹುದು. ಪಾಪಗಳ ಅತೀ ಕೆಟ್ಟ ರೀತಿಯಲ್ಲಿ ಅಪರಾಧಿಗಳಾದ ಕೆಲವು ಪಾಪಿ ಜನರ ಬಗ್ಗೆ ಪೌಲನು ಅಲ್ಲಿ ಹೇಳಿದ್ದಾನೆ.

ಅವರು ದೇವರನ್ನು ತಿರಸ್ಕರಿಸಿದರು ಮತ್ತು ದೇವರು ಅವರನ್ನು ತಿರಸ್ಕರಿಸಿದನು. ಅವರು ಕೊಲೆಗಾರರು, ದುಷ್ಕರ್ಮಿಗಳು, ಚಾಡಿ ಹೇಳುವವರು, ಪುರುಷಗಾಮಿಗಳು, ದೇವರನ್ನು ದ್ವೇಷಿಸುವವರು ಇತ್ಯಾದಿ ಆಗಿದ್ದರು. ಆದುದರಿಂದ ಅವರು ಧಾರ್ಮಿಕರಾಗಿರಲಿಲ್ಲ ಎಂದು ತಿರ್ಮಾನಿಸೋಣವೋ? ರೋಮಾಪುರ 1:25ನ್ನು ಆಲಿಸಿರಿ: "ಅವರು ಸತ್ಯ ದೇವರನ್ನು ಬಿಟ್ಟು ಅಸತ್ಯವಾದದ್ದನ್ನು ಹಿಡಿದುಕೊಂಡು ಸೃಷ್ಟಿಕರ್ತನನ್ನು ಪೂಜಿಸದೇ ಸೃಷ್ಟಿ ವಸ್ತುಗಳನ್ನೇ ಪೂಜಿಸಿ ಸೇವಿಸುವವರಾದರು. ಸೃಷ್ಠಿ ಕರ್ತನೊಬ್ಬನೇ ನಿರಂತರ ಸ್ತುತಿಹೊಂದತಕ್ಕವನು." ಅವರು ಪಾಪದ ಅಪರಾಧಿಗಳಾಗಿದ್ದರೂ ಅವರು ಇನ್ನೂ ಆರಾಧನೆ ಮಾಡಿದರು. ಅವರು ತಪ್ಪಾದ ಸಂಗತಿಯನ್ನು ಆರಾಧಿಸಿದರು: ಸೃಷ್ಟಿಕರ್ತನನ್ನು ಅಲ್ಲ ಅದೇ ಸೃಷ್ಟಿಯನ್ನು ಪ್ರತಿಯೊಬ್ಬರೂ ಯಾವುದನ್ನಾದರೂ ಆರಾಧಿಸಬೇಕೆಂದು ನಾನು ಸೂಚಿಸುತ್ತೇನೆ! ಅವನು ಸೃಷ್ಟಿಕರ್ತನನ್ನು ಆರಾಧಿಸದಿದ್ದರೆ ಅವನು ಸೃಷ್ಟಿಯನ್ನು ಆರಾಧಿಸುವನು.

ಇಂದು ಜನರು ಅನೇಕ ಸಂಗತಿಗಳನ್ನು ಆರಾಧಿಸುವರು. ಕೆಲವರು *ಹಣವನ್ನು* ಆರಾಧಿಸುತ್ತಿರುವರು. *ಹಣವು* ಸುಖವನ್ನು ತರುವುದು ಎಂದು ಅವರು ಯೋಚಿಸುವರು, ಅದರಿಂದ ಅವರು ಸರ್ವಶಕ್ತ ಧನವನ್ನು ಸೇವಿಸಲು ತಮ್ಮ ಜೀವಿತಗಳನ್ನು ಕೊಡುವರು. ಇತರರು *ಸುಖಾನುಭವವನ್ನು* ಆರಾಧಿಸುವವರು; ಒಳ್ಳೇ ಸಮಯ ಇರುವದರಲ್ಲಿಯೇ ಆಸಕ್ತಿಯುಳ್ಳವರಾಗಿರುವರು. ಕೆಲವರು *ವಿಜ್ಞಾನವನ್ನು* ಆರಾಧಿಸುವವರು; ಎಲ್ಲಾ ಉತ್ತರಗಳಿಗಾಗಿ ಅವರು ವಿಜ್ಞಾನವನ್ನು ನೋಡುವರು. ನಾವು ಪ್ರಗತಿ ಹೊಂದಿದ ತಂತ್ರಜ್ಞಾನವನ್ನು ನಾವು ಹೊಂದಿದರೆ, ಇಲ್ಲವೇ ವಿಜ್ಞಾನಗಳ ಮೂಲಕ ಸಾಕಷ್ಟನ್ನು ಕಲಿತುಕೊಂಡರೆ, ನಾವು ಭೂಲೋಕದ ಮೇಲೆ ಪರಲೋಕವನ್ನು ಸಾಧಿಸಿ ಕೊಳ್ಳುವೆವು. ಮತ್ತು ಕೆಲವರು *ಪಾಪವನ್ನು* ಆರಾಧಿಸುತ್ತಾರೆ. *ಪಾಪವು* ಅವರನ್ನು ಗುಲಾಮರಾಗಿ ಮಾಡಿಕೊಂಡಿದೆ ಮತ್ತು ಅವರನ್ನು ಜಯಿಸಿಕೊಂಡಿದೆ ಅವರಿಗೆ ಬೇರೆ ಯಾವುದೂ ಆಸಕ್ತಿಯುಳ್ಳದ್ದಾಗಿರುವದಿಲ್ಲ. ಆದರೆ ಪ್ರತಿಯೊಬ್ಬನು ಯಾವುದನ್ನಾದರೂ ಆರಾಧಿಸುತ್ತಾರೆಂಬುದು ಇಲ್ಲಿಯ ವಿಷಯವಾಗಿದೆ.

ಹಾಗಾದರೆ, ನಿಮ್ಮ ಆಯ್ಕೆಯು ನೀವು ಆರಾಧಿಸುತ್ತಿರೋ ಅಥವಾ ಇಲ್ಲವೋ ಎಂಬುದಾಗಿರದೇ, ನೀವು *ಯಾವುದನ್ನು* ಆರಾಧಿಸುತ್ತೀರಿ ಎಂಬುದಾಗಿದೆ. ಯೇಸುವು ಆ ಆಯ್ಕೆಯನ್ನು ಹೀಗೆ ಹೇಳಿದ್ದಾನೆ: "ಯಾವನೂ ಇಬ್ಬರು ಯಜಮಾನರಿಗೆ ಸೇವೆ ಮಾಡಲಾರನು. ಅವನು ಒಬ್ಬನನ್ನು ದ್ವೇಷಿಸಿ ಮತ್ತೊಬ್ಬನನ್ನು ಪ್ರೀತಿಸುವನು; ಇಲ್ಲವೆ ಒಬ್ಬನನ್ನು ಹೊಂದಿಕೊಂಡು ಮತ್ತೊಬ್ಬನನ್ನು ತಾತ್ಸರ ಮಾಡುವನು. ನೀವು ದೇವರನ್ನೂ ಧನವನ್ನೂ ಕೂಡ ಸೇವಿಸಲಾರಿರಿ" (ಮತ್ತಾಯ 6:24). ಅಲ್ಲಿ ನಿನ್ನ ಆಯ್ಕೆಯಿರುವುದು: ದೇವರು ಇಲ್ಲವೇ ಧನಪೀಡೆ, ಸೃಷ್ಟಿಕರ್ತ ಇಲ್ಲವೇ ಸೃಷ್ಟಿ. ಯಾವುದು ನಿನಗಾಗಿರುವುದು?

## ಮುಕ್ತಾಯ

ಯಾಕೆ ಈ ಆಯ್ಕೆಯು ಕೊಡಲ್ಪಟ್ಟಿದೆ, ನೀವು ದೇವರನ್ನು ಸೇವೆ ಮಾಡಲು ಇಲ್ಲವೇ ಆರಾಧಿಸಲು ಆಯ್ಕೆ ಮಾಡಿಕೊಳ್ಳಬೇಕು? ಹಾಗೆ ಮಾಡದೇ ಇದ್ದರೆ ನೀವು ಸಂತೋಷದಿಂದ ಇರಬಹುದೋ? ಹೌದು ಸತ್ಯವಾಗಿ, ದೇವರ ಸೇವೆ ಮಾಡದೇ ಕೆಲವೊಂದು ಮಟ್ಟಿಗೆ ನೀವು ಸಂತೋಷದಿಂದ ಇರಬಹುದು. ಆದರೆ, ಕರ್ತನನ್ನು ಸೇವಿಸುವದರಿಂದ ಪೂರ್ಣವಾದ, ಸಂತೋಷಕರವಾದ, ಅಂತ್ಯದ - ಸಮೃದ್ಧವಾದ ಜೀವನ ಬರುತ್ತದೆಂದು ನಾನು ನಂಬುತ್ತೇನೆ. ಯೇಸುವು ಹೇಳಿದ ಈ ರೀತಿಯನ್ನು ನಾನು ಮೆಚ್ಚಿ ಕೊಳ್ಳುತ್ತೇನೆ:

> ನಿಮಗೆ ಸತ್ಯವಾಗಿ ಹೇಳುತ್ತೇನೆ, ಯಾವನು ನನ್ನ ನಿಮಿತ್ತವೂ ಸುವಾರ್ತೆಯ ನಿಮಿತ್ತವೂ ಮನೆಯನ್ನಾಗಲಿ ಅಣ್ಣತಮ್ಮಂದಿರನ್ನಾಗಲಿ ಅಕ್ಕತಂಗಿಯರನ್ನಾಗಲಿ ತಾಯಿಯನ್ನಾಗಲಿ ತಂದೆಯನ್ನಾಗಲಿ ಮಕ್ಕಳನ್ನಾಗಲಿ ಭೂಮಿಯನ್ನಾಗಲಿ ಬಿಟ್ಟು ಬಿಟ್ಟಿರುವನೋ ಅವನಿಗೆ ಈಗಿನ ಕಾಲದಲ್ಲಿ ಮನೆ ಅಣ್ಣ ತಮ್ಮ ಅಕ್ಕ ತಂಗಿ ತಾಯಿ ಮಕ್ಕಳು ಭೂಮಿ ಇವೆಲ್ಲವೂ ಹಿಂಸೆಗಳು ಸಹಿತವಾಗಿ ನೂರರಷ್ಟು ಸಿಕ್ಕೇ ಸಿಕ್ಕುತ್ತವೆ; ಮತ್ತು ಮುಂದಣ ಲೋಕದಲ್ಲಿ ನಿತ್ಯಜೀವವು ದೊರೆಯುವದು (ಮಾರ್ಕ 10:29, 30).

ಕ್ರೈಸ್ತತ್ವವು "ಆಕಾಶದಲ್ಲಿಯ ಪಕ್ಷಿಯಂತೆ" ಇರುವದಿಲ್ಲ. ಈ ಜೀವನದಲ್ಲಿ ಅದು ಅದ್ಭುತವಾದ ಆಶೀರ್ವಾದಗಳನ್ನು ಒದಗಿಸಿ ಕೊಡುತ್ತದೆ.

ಆದರೆ ಕ್ರೈಸ್ತತ್ವವು ಬೇರೆ ಯಾವುದು ಕೊಡದಂಥದ್ದನ್ನು ಒದಗಿಸಬಲ್ಲದು: "... ಮುಂದಣ ಲೋಕದಲ್ಲಿ ನಿತ್ಯಜೀವವನ್ನು!" ನೀವು ಕ್ರಿಸ್ತನೊಂದಿಗೆ ಜೀವಿಸುವಂತೆಯೇ ಕ್ರಿಸ್ತನಿಲ್ಲದೇ ಜೀವಿಸುವಾಗ ಅಷ್ಟೇ ಸಂತೋಷಕರವಾಗಿದ್ದರೂ, ಧನಲೋಭಿಗಿಂತಲು ಹೆಚ್ಚಾಗಿ ದೇವರನ್ನು ಆಯ್ದುಕೊಳ್ಳುವುದು ನಿಮಗೆ ಲಾಭಕರವಾಗಿರುವುದು, ಯಾಕಂದರೆ ಈ ಲೋಕದಲ್ಲಿ *ಕ್ರಿಸ್ತನನ್ನು ಬಿಟ್ಟರೆ* ಯಾವುದೂ ನಿಮ್ಮನ್ನು ಪರಲೋಕಕ್ಕೆ ಒಯ್ಯುವದಿಲ್ಲ.

ನೀವು ಇಂದು ಆತನನ್ನು ಆಯ್ದುಕೊಳ್ಳತಕ್ಕದ್ದು. ಯೆಹೋಶುವನು ಇಸ್ರಾಯೇಲ ಜನಾಂಗವನ್ನು ಆಹ್ವಾನಿಸಿದನು: "ನೀವು ಯಾರನ್ನು ಸೇವಿಸಬೇಕೆಂದಿದ್ದೀರೋ ಅದನ್ನು ಇಂದೇ ಆರಿಸಿಕೊಳ್ಳಿರಿ" (ಯೆಹೋಶುವ 24:15). ಅನೇಕರು ತಮ್ಮ ತೀರ್ಮಾನವನ್ನು ಮುಂದೆ ಹಾಕಲು ಬಯಸುತ್ತಾರೆ. "ನಾನು ನಿನ್ನನ್ನೇ ಆಯ್ಕೆ ಮಾಡಿಕೊಳ್ಳುತ್ತೇನೆ, ಸರಿಯೇ, ಆದರೆ ಈಗಗಾಲೇ ಅಲ್ಲ, ಸ್ವಲ್ಪ ಸಮಯದ ನಂತರ" ಎಂದು ಅವರು ಹೇಳುವಂತೆ ತೋರುತ್ತದೆ. ಅನಂತರದಲ್ಲಿ ಸಮಯವಿರುವದೆಂದು ನಿಮಗೇ ಹೇಗೆ ತಿಳಿದಿರುವುದು? ಈ ದಿನವೇ ನಿನಗೆ ಇರುವ ಎಲ್ಲವೂ ಆಗಿದೆ. ಈ ದಿನವೇ ನೀವು ಕ್ರಿಸ್ತನನ್ನು ಆಯ್ದುಕೊಳ್ಳುವ ದಿನವಾಗಿದೆ. ನೀವು ಮಾಡಲಿಕ್ಕೆ ಒಂದು ಆಯ್ಕೆ ಇದೆ. ಇಂದು ನೀವು ಒಂದು ಆಯ್ಕೆಯನ್ನು ಮಾಡುತ್ತೀರಿ. ಇಂದು ನೀವು ಕ್ರಿಸ್ತನನ್ನು ಆಯ್ಕೆ ಮಾಡಿಕೊಳ್ಳದಿದ್ದರೆ, ಪರಿಣಾಮ ವಾಗಿ ಲೋಕವನ್ನು ಆಯ್ದುಕೊಂಡಿರುವಿರಿ. ನೀವು ಮಧ್ಯದಲ್ಲಿರಲಾಗದು. "ನೀವೇ ಆಯ್ದುಕೊಳ್ಳಿರಿ" - ಮತ್ತು ಕ್ರಿಸ್ತನನ್ನು ಆಯ್ದುಕೊಳ್ಳಿರಿ.

---

ಟಿಪ್ಪಣಿ

[1]*The Sun-Herald,* Sydney, N.S.W., January 1971.

© 2009 Truth for Today